ವೇಶ್ಯೆಯೊಬ್ಬಳು ಇನ್ನೊಬ್ಬ ಹೆಂಗಸಿನ ಹೆಗಲನ್ನು ಹಿಡಿದು ತಲೆಯಾಡಿಸಿದಳು.

'ಇಲ್ಲಿ ತಮ್ಮ ಸಹೋದರಿಯರನ್ನು ಭೇಟಿಯಾಗಲು ಅಣ್ಣಂದಿರು ಬರೋದನ್ನುಇಷ್ಟು ವರ್ಷಗಳ ನಂತರ ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.' ನಂತರ ಎಲ್ಲರೂ ಕಿಲಕಿಲನೆ ನಕ್ಕರು.

'ನಮ್ಮ ಸಮೀಪದ ಸಂಬಂಧಿಕರೊಬ್ಬರು ಜೀವನ್ಮರಣದ ನಡುವೆ ಹೋರಾಡುತ್ತಿದ್ದಾರೆ. ನಾವು ಅವರ ಬಗ್ಗೆ ವಿಚಾರಿಸುತ್ತಿದ್ದೇವೆ.' ಕೇಶವಲಾಲರ ವಾಕ್ಯವನ್ನು ಸುರೇಂದ್ರರು ಪೂರ್ಣಗೊಳಿಸಿದರು.

'ನೀವು ದಯವಿಟ್ಟು ನಮಗೆ ರೇಶಮ್ ಬಾಯಿಯವರ ಬಂಗ್ಲೆಯನ್ನು...'

'ಅರೇ ಓ ಗೂಬೆ!' ನೀಳಕಾಯದ, ದಷ್ಟಪುಷ್ಟ ಸುಂದರಿಯಂತಿದ್ದ ಮಹಿಳೆಯೊಬ್ಬಳು ಎರಡು ಹೆಜ್ಜೆ ಮುಂದೆ ಬಂದು ಕೇಶವಲಾಲರ ಎದುರಿಗೆ ಎದೆಯೊಡ್ಡಿ ನಿಂತಳು. ಕೇಶವಲಾಲರು ಎರಡು ಹೆಜ್ಜೆ ಹಿಂದಕ್ಕೆ ಹೋದಾಗ, ಆ ಮಹಿಳೆ ಅವರ ಕೈಯನ್ನೇ ಹಿಡಿದುಕೊಂಡಳು, 'ರೇಶಮ್ ಬಾಯಿಯ ಹತ್ತಿರ ಇರೋದು ನಮ್ಮ ಬಳಿ ಇಲ್ಲವೇ?...ಹೇಳಿಹೇಳಿ.. ಇಲ್ನೋಡಿ...ನಮ್ಮ ಹತ್ತಿರ ಏನು ತಾನೇ ಇಲ್ಲ? ಒಮ್ಮೆ ನೀವು ಬಂದರೆ ರೇಶಮ್ ಬಾಯಿಯನ್ನು ನೀವು ಮತ್ತೆ ಮರೆತೂ ಕೇಳುವುದಿಲ್ಲ...'

ಮಹಿಳೆಯರ ಗುಂಪು ಮತ್ತೊಮ್ಮೆ ಅಟ್ಟಹಾಸದಿಂದ ನಕ್ಕಿತು. ಈಗ ಬೇರೆ ಬೇರೆ ಕೊಠಡಿಗಳಿಂದ ಮಹಿಳೆಯರು ಹೊರ ಬಂದು ಈ ಪುಕ್ಕಟೆ ಮನರಂಜನೆಯನ್ನು ನೋಡಲು ಗುಂಪಾಗಿ ಕಲೆತು ನಿಂತರು. ಅಲ್ಲಿಂದ ಹಾದು ಹೋಗುತ್ತಿದ್ದ ಮೂರ್ನಾಲ್ಕು ಗಿರಾಕಿಗಳು ಸಹ ಅಲ್ಲಿ ನಿಂತು ತಮಾಷೆಯನ್ನು ನೋಡಲಾರಂಭಿಸಿದರು. ಕೇಶವಲಾಲ್ ಮತ್ತು ಸುರೇಂದ್ರರ ಮುಖದಲ್ಲಿ ವ್ಯಗ್ರತೆ ಮೂಡಿತು.

ಅದೃಷ್ಟವೆಂಬಂತೆ ಆ ದಷ್ಟಪುಷ್ಟ ಮಹಿಳೆ ಕೇಶವಲಾಲರ ಕೈಯನ್ನು ತಕ್ಷಣ ಬಿಟ್ಟಿದ್ದಳು. ಅವಳೊಂದಿಗೆ ಮಾತನಾಡುವಾಗ ಅವಳ ಶರೀರಕ್ಕೆ ಮೆತ್ತಿಕೊಂಡಿದ್ದ ಬಣ್ಣ, ಗೋಡೆಗೆ ಹಚ್ಚುವ ಪ್ಲಾಸ್ಟರ್‌ನಂತೆ ಚಿತ್ರವಿಚಿತ್ರವಾಗಿ ಕಂಡಿತು. ಅಗ್ಗದ ಅಲಂಕಾರದ ಸಾಮಗ್ರಿಗಳಿಂದ ಸೂಸುತ್ತಿದ್ದ ವಾಸನೆಯಿಂದಾಗಿ ಕೇಶವಲಾಲರಿಗೆ ಉಸಿರು ಕಟ್ಟಿದಂತಾಯಿತು.

ಇಲ್ಲಿ ಹೆಚ್ಚು ಹೊತ್ತು ನಿಂತರೆ ತಡವಾಗುವುದೆಂದು ಯೋಚಿಸಿ ಸುರೇಂದ್ರರು ಕೇಶವಲಾಲರನ್ನು ಎಳೆದುಕೊಂಡು, ಬೇಗ ಹೋಗೋಣವೆಂದು ಸಂಜ್ಞೆ ಮಾಡಿದರು. ನಂತರ ಇಬ್ಬರು ಸುಮಾರಾಗಿ ಓಡುತ್ತಲೇ ಹೋದರು. ಆದರೂ ಹಿಂದಿನಿಂದ ಅಟ್ಟಹಾಸದ ನಗು ಕೇಳಿಬರುತ್ತಿತ್ತು.

ಕೇಶವ್ ಭಾಯಿ' ರಸ್ತೆಯ ಅಂಚಿಗೆ ಬಂದು ಸುರೇಂದ್ರರು ಹೇಳಿದರು, 'ಹೀಗೆ ಮಾಡಿದರೆ ನಮಗೆ ರೇಶಮ್ ಬಾಯಿಯ ವಿಳಾಸ ತಿಳಿಯಲ್ಲ.' 'ನನಗೂ ಹೀಗೆಯೇ ಅನ್ನಿಸುತ್ತದೆ...ನಾವಿಲ್ಲಿಗೆ ಬಂದು ತಪ್ಪು ಮಾಡಿದೆವು...' ಕೇಶವಲಾಲರು ತಮ್ಮ ಕತ್ತಿನ ಬೆವರನ್ನು ಒರೆಸಿಕೊಂಡರು. 'ನಾವು ನೇರವಾಗಿ ಶಿವಡಿ ಆಸ್ಪತ್ರೆಗೆ ಹೋಗಿ, ಅಲ್ಲಿಯೇ ವಿಚಾರಿಸುವುದು ಒಳಿತು...' ಸುರೇಂದ್ರರಿಗೆ ಈಗ ಹೊಳೆಯಿತು.

ಕೇಶವಲಾಲರಿಗೆ ಈ ಮಾತು ಹಿಡಿಸಿತು. ಬೇರೆ ಮಾರ್ಗವಿರಲಿಲ್ಲ. ಈಗ ಮೂರನೆಯ ಜಾಗಕ್ಕೆ ಹೋಗಿ ರೇಶಮ್ ಬಾಯಿಯ ವಿಳಾಸವನ್ನು ಕೇಳುವ ಧೈರ್ಯ ಇಬ್ಬರಿಗೂ ಬರಲಿಲ್ಲ. ಇಬ್ಬರು ಮೌನವಾಗಿ ನಲ್ ಬಾಜಾರ್ ದಿಕ್ಕಿಗೆ ಹೊರಳಿದರು. ಅಲ್ಲಿಂದ ಹಾದು ಹೋಗುತ್ತಿದ್ದ ಟ್ರಾಮ್‌ನೊಳಗೆ ಓಡಿ ಹೋಗಿ ಹತ್ತಿದರು. ಆಗಸದಿಂದ ಮಳೆಯ ತುಂತುರು ಬೀಳುವುದು ಆರಂಭವಾಗಿತ್ತು.

ಟ್ರಾಮ್‌ನಲ್ಲಿ ಕೂತ ನಂತರ ಕೇಶವಲಾಲರ ಮುಖದಲ್ಲಿದ್ದ ಕಳವಳ ಸ್ವಲ್ಪ ಕಡಿಮೆಯಾಯಿತು. ಅವರು ತಮ್ಮ ಜೇಬಿನಿಂದ ಗಾಂಧಿ ಟೋಪಿಯನ್ನು ಹೊರತೆಗೆದು ತಲೆಗೆ ಹಾಕಿಕೊಂಡರು. ಸುರೇಂದ್ರರೂ ಹೀಗೆ ಮಾಡಿದರು. ಮಾರ್ಕೆಟ್ ಸುಮಾರಾಗಿ ಬಂದ್ ಆಗಿತ್ತು. ರಸ್ತೆಯಲ್ಲಿ ಈ ಹಿಂದಿನ ಗದ್ದಲ ಕಡಿಮೆಯಾಗಿತ್ತು. ಸುರೇಂದ್ರರು ತಮ್ಮ ಜಾಕೆಟ್ ಜೇಬಿನಿಂದ ಚೈನಿನ ಗಡಿಯಾರವನ್ನು ಹೊರತೆಗೆದು ಸಮಯ ನೋಡಿದರು.

ರಾತ್ರಿಯ ಹನ್ನೊಂದು ಗಂಟೆಯಾಗುವುದರಲ್ಲಿತ್ತು. ಇಬ್ಬರೂ ಶಿವಡಿ ಆಸ್ಪತ್ರೆಗೆ ಬಂದಾಗ ಸುಮಾರಾಗಿ ಎಲ್ಲರೂ ನಿದ್ರಿಸುತ್ತಿದ್ದರು. ಕಾವಲುಗಾರನಿಗೆ ಹೇಗೋ ಒಪ್ಪಿಸಿ ಒಳಗೆ ಹೋದರು. ವಿಚಾರಣೆಯ ಕೌಂಟರ್‌ನಲ್ಲಿ ಯಾರೂ ಇರಲಿಲ್ಲ. ಕರ್ತವ್ಯದ ಮೇಲಿದ್ದ ವಾರ್ಡ್‌ಬಾಯ್ ಹೊರಗೆ ಮೂಲೆಯಲ್ಲಿ ಕೂತು ತಂಬಾಕು ಮೆಲ್ಲುತ್ತಿದ್ದ. ಕರ್ತವ್ಯದ ಮೇಲಿದ್ದ ಮೆಡಿಕಲ್ ಆಫೀಸರ್ ಬಳಿಗೆ ಅವನು ಇಬ್ಬರನ್ನೂ ಕರೆದೊಯ್ದ.

ಮೂರ್ನಾಲ್ಕು ನರ್ಸ್‌ಗಳು ಈಗಲೂ ಅತ್ತಇತ್ತ ಬಂದು ಹೋಗುತ್ತಿದ್ದರು. ಎಲ್ಲೆಡೆಯಲ್ಲೂ ಮಂದ ಕೆಂಪು ಬಲ್ಬ್‌ಗಳು ಉರಿಯುತ್ತಿದ್ದವು. ರೋಗಿಗಳು ಅರೆನಿದ್ರೆಯಲ್ಲಿ ಅತ್ತ ಇತ್ತ ಓಡಾಡುತ್ತಿದ್ದರು. ಕೆಲವು ರೋಗಿಗಳ ನರಳಾಟ ಕೇಳಿಬರುತ್ತಿತ್ತು.

ಜನರಲ್ ವಾರ್ಡಿನ ರೋಗಿಗಳ ಸಂಬಂಧಿಕರು ಅಲ್ಲಲ್ಲಿ ನೆಲದ ಮೇಲೆ ಮುದುಡಿ ನಿದ್ರಿಸುತ್ತಿದ್ದರು. ಕೇಶವಲಾಲರು ಮೆಡಿಕಲ್ ಆಫೀಸರ್ ಅವರ ಚೇಂಬರ್‌ನ ಬಾಗಿಲ ಬಳಿಗೆ ಬಂದು ಕೇಳಿದರು, 'ಕ್ಷಮಿಸಿ ಸಾರ್, ನಾನು ಒಳಗೆ ಬರಬಹುದೇ?'

ಮೂರು

ಮೆಡಿಕಲ್ ಆಫೀಸರ್ ಇದೀಗ ತಾನೇ ಜಟಿಲ ಸಮಸ್ಯೆಯೊಂದರಿಂದ ಮುಕ್ತರಾಗಿ ಬಹು ಕಷ್ಟದಿಂದ ನೆಮ್ಮದಿಯಿಂದ ಕೂತಿದ್ದರು. ಈಗ್ಗೆ ಒಂದು ಗಂಟೆಗೆ ಮೊದಲು ಅವರು ಕರ್ತವ್ಯಕ್ಕೆ ಹಾಜರಾಗಿದ್ದರು; ಬಂದೊಡನೆಯೇ ಕೇಸ್‌ವೊಂದರಲ್ಲಿ ಮಗ್ನರಾಗಿದ್ದರು. ಅವರಿಂದ ರೋಗಿಯನ್ನು ಉಳಿಸಲು ಸಾಧ್ಯವಾಗಿರಲಿಲ್ಲ; ನಿಜ ಹೇಳಬೇಕೆಂದರೆ ರೋಗಿಯನ್ನು ಉಳಿಸುವ ಪ್ರಶ್ನೆಯೇ ಇರಲಿಲ್ಲ. ಆದರೆ ಆಸ್ಪತ್ರೆಯ ನಿಯಮ ಕಾನೂನು ಮತ್ತು ಸರ್ಕಾರಿ ಕಾನೂನುಗಳು ಮನುಷ್ಯ ನೆಮ್ಮದಿಯಿಂದ ಸಾಯಲು ಸಹ ಬಿಡುವುದಿಲ್ಲ. ಸಾಯುವವನಂತೂ ಈ ಜಗತ್ತಿನಿಂದ ಬಿಡುಗಡೆ ಹೊಂದುತ್ತಾನೆ, ಆದರೆ ಅವನ ಹಿಂದೆ ಈ ಮೆಡಿಕಲ್ ಆಫೀಸರ್‌ರಂಥ ವೈದ್ಯರ ನೆಮ್ಮದಿ ಕೆಡುತ್ತದೆ.

ಕೇಶವಲಾಲರು ಬಂದಿದ್ದು ವೈದ್ಯರಿಗೆ ಸರಿಯೆನಿಸಲಿಲ್ಲ. ಆದರೆ ಅವರಿಗೆ ತಮ್ಮ ಜವಾಬ್ದಾರಿಯ ಅರಿವಿತ್ತು. ಅವರು ಯಾವುದೇ ಆಸಕ್ತಿವಹಿಸದೆ ಕೇಶವಲಾಲರನ್ನು ನೋಡಿದರು, ನಂತರ ತಲೆಯಾಡಿಸಿ ಹೇಳಿದರು, 'ಯಸ್, ಕಮ್ ಇನ್! ನೀವ್ಯಾರು? ಏನು ಕೆಲಸವಿದೆ?' ಕೇಶವಲಾಲರು ಒಳಗೆ ಬಂದು ಹೇಳಿದರು, 'ಸಾರ್, ನನ್ನ ಹೆಸರು ಕೇಶವಲಾಲ್ ಗಾಂಧಿ, ಇವರು ನನ್ನ ಜೊತೆಗಾರರು...' ಹಿಂದೆ ನಿಂತಿದ್ದ ಸುರೇಂದ್ರರೆಡೆಗೆ ಸಂಜ್ಞೆ ಮಾಡಿ ಹೇಳಿದರು, 'ಸುರೇಂದ್ರ ಮಶರೂವಾಲಾ...'

'ಸರಿಸರಿ...' ವೈದ್ಯರಿಗೆ ಇವರ ಹೆಸರಿನ ಬಗ್ಗೆ ಆಸಕ್ತಿ ಇರಲಿಲ್ಲ, 'ಆದರೆ ಏನು ಕೆಲಸ ಅಂತ ಹೇಳಿ?'

'ಮಿಸ್ಟರ್ ಹೆಚ್.ಎಂ.ಗಾಂಧಿ ಎನ್ನುವ ರೋಗಿಯನ್ನು ನಿಮ್ಮ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದೆ ಎಂಬ ಸುದ್ದಿ ನಮಗೆ ಸಿಕ್ಕಿದೆ...'

"ಹೆಸರು ಏನಂದಿರಿ?' ವೈದ್ಯರ ಕಣ್ಣುಗಳಲ್ಲಿ ಮೊದಲ ಬಾರಿಗೆ ಕುತೂಹಲ ಕಂಡಿತು.

"ಮಿಸ್ಟರ್ ಹೆಚ್.ಎಂ.ಗಾಂಧಿ'

'ಯಸ್, ಯಸ್...ಮಿಸ್ಟರ್ ಹೆಚ್. ಎಂ.ಗಾಂಧಿ...' ವೈದ್ಯರು ತಮ್ಮ ಕುರ್ಚಿಯಲ್ಲಿ ಆರಾಮಾಗಿ ಕೂತರು, "ನೀವಿಬ್ಬರು ಪೇಶೆಂಟಿನ ಸಂಬಂಧಿಕರೆಂದು ತೋರುತ್ತೆ?'

'ಹೌದು ಸಾರ್, ಮಿಸ್ಟರ್ ಗಾಂಧಿ ನನಗೆ ಚಿಕ್ಕಪ್ಪ ಆಗಬೇಕು. ಈ ಸುರೇಂದ್ರರು ಅವರ ಅಳಿಯ.

'ಆಶ್ಚರ್ಯ! ನೀವು ಇಷ್ಟು ಹತ್ತಿರದ ಸಂಬಂಧಿಕರಾಗಿದ್ದಾಗ್ಯೂ ಮಿಸ್ಟರ್...'

'ಅಂದರೆ?'

'ಐ ಯಾಮ್ ಸಾರಿ, ಮಿಸ್ಟರ್ ಕೇಶವಲಾಲ್.' ವೈದ್ಯರು ಔಪಚಾರಿಕವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.'ನಿಮ್ಮ ಚಿಕ್ಕಪ್ಪನನ್ನು ಉಳಿಸಲು ನಮ್ಮಿಂದ ಸಾಧ್ಯವಾಗಲಿಲ್ಲ. ಈಗ್ಗೆ ಒಂದು ಗಂಟೆಗೆ ಮೊದಲು ಅವರ ಜೀವ ಹಾರಿ ಹೋಯಿತು. ಅವರ ಕೇಸ್‌ಪೇಪರ್ಸ್‌ಗಳಲ್ಲಿ ಬರೆಸಲಾಗಿದ್ದ ವಿಳಾಸಕ್ಕೆ ಈ ವೇಳೆಯಲ್ಲಿ ನಾವು ಸುದ್ದಿ ಮುಟ್ಟಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೇ ಮಿಸ್ಟರ್ ಗಾಂಧಿಯವರ ಶವವನ್ನು ಶವಾಗಾರದಲ್ಲಿ ಅನಾಥ ಶವವಾಗಿ ಇಡಿಸಿದ್ದೇವೆ.'

ಕೇಶವಲಾಲರು ಮತ್ತು ಸುರೇಂದ್ರರು ಪರಸ್ಪರರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡರು.

'ಯಾಕೆ ನಿಂತಿದ್ದೀರ? ಕೂತುಕೊಳ್ಳಿ.' ವೈದ್ಯರು ಮೊದಲ ಬಾರಿಗೆ ವಿವೇಕವನ್ನು ಪ್ರದರ್ಶಿಸಿದರು.

ಇಬ್ಬರು ಮೆಲ್ಲನೆ ವೈದ್ಯರೆದುರಿಗಿದ್ದ ಕುರ್ಚಿಗಳಲ್ಲಿ ಕೂತರು.

'ಮಿಸ್ಟರ್ ಗಾಂಧಿಗೆ ಯಾವಯಾವ ರೋಗಗಳಿದ್ದವು ಎಂಬುದು ನಿಮಗೆ ಗೊತ್ತಿರಲೇ ಬೇಕು. ಅವರನ್ನು ಉಳಿಸುವುದು ಅಸಂಭವವಾಗಿತ್ತು. ನೀವು ಶಿಷ್ಟ ಪರಿವಾರದವರು, ಆದರೆ ಅವರನ್ನು ಇಲ್ಲಿಗೆ ಕರೆತಂದ ವಿಧಾನವನ್ನು ನೋಡಿದರೆ...'

(ಸಶೇಷ)